# ಬೆಂಗಳೂರಿಗೆ ಬಂದ ಅಪರೂಪದ
# ಯುರೋಪಿಯನ್ ಅತಿಥಿ



■ ಆರ್. ಮಂಜುನಾಥ್
ಚಿತ್ರಗಳು: ಆದಿತ್ಯ ಜಿ. ತಿಳಿ

ಬೆಂಗಳೂರು ಎಂದರೆ ನಮಗೆ ನೆನಪಾಗುವುದು ವಾಹನ ದಟ್ಟಣೆ, ಎತ್ತರದ ಕಟ್ಟಡಗಳು ಮತ್ತು ಧಾವಂತದ ಬದುಕು. ಆದರೆ ಇದೇ ಸಿಮೆಂಟ್ ಕಾಡಿನ ಮಧ್ಯೆ, ಪ್ರಕೃತಿಯ ಮೌನ ಕ್ರಾಂತಿಯೂ ಆಗಿದೆ. ಯುರೋಪಿನ ಶೀತ ಗಾಳಿಯಿಂದ ತಪ್ಪಿಸಿಕೊಳ್ಳಲು ಅಲ್ಲಿಂದ ಹಕ್ಕಿಯೊಂದು ಹಾರಿಕೊಂಡು, ಸಾವಿರಾರು ಮೈಲುಗಳ ದೂರದ ಆಫ್ರಿಕಾಕ್ಕೆ ಹೋಗುವ ಹಾದಿಯಲ್ಲಿ ದಿಕ್ಕು ಬದಲಿಸಿ ಬೆಂಗಳೂರಿನ ಮೇಲಿನ ಅಂಬಲಿಪುರ ಕೆರೆಗೆ ಬಂದಿಳಿದಿದೆ!

ಕರ್ನಾಟಕದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಈ ಪಕ್ಷಿ ಕ್ಯಾಮೆರಾ ಕಣ್ಣಿಗೆ ಸೆರೆಯಾಗಿದೆ. ಇದರ ಹೆಸರು, ‘ಯುರೋಪಿಯನ್ ಹನಿ ಬಜಾರ್ಡ್’ (**European Honey Buzzard Pernis apivorus**).

2026ರ ಜನವರಿ 22ರಂದು ಮೇಲಿನ ಅಂಬಲಿಪುರ ಕೆರೆಯ ಪರಿಸರದಲ್ಲಿ ಕ್ಯಾಮೆರಾ ಕಣ್ಣಿಗೆ ಬಿದ್ದ ಈ ಹಕ್ಕಿ, ರಾಜ್ಯದ ಪಕ್ಷಿತಜ್ಞರ ಹುಬ್ಬೇರಿಸುವಂತೆ ಮಾಡಿದೆ. ಈವರೆಗೆ ಕರ್ನಾಟಕದ ಗಡಿಯೊಳಗೆ ಈ ಪ್ರಭೇದದ ಹಕ್ಕಿ ಅಧಿಕೃತವಾಗಿ ದಾಖಲಾಗಿರಲಿಲ್ಲ. ಅಂತರರಾಷ್ಟ್ರೀಯ ಪಕ್ಷಿ ದಾಖಲಾತಿ ಸಂಸ್ಥೆಯಾದ ‘**Ebird**’ ಇದನ್ನು ಅನುಮೋದಿಸಿದ್ದು, ಇದೊಂದು ಐತಿಹಾಸಿಕ ದಾಖಲೆಯಾಗಿದೆ.

‘ಯುರೋಪಿಯನ್ ಹನಿ ಬಜಾರ್ಡ್’ ಕುರಿತು:

ಹೆಸರೇ ಸೂಚಿಸುವಂತೆ ಇವು ಜೇನುಗೂಡುಗಳ ಮೇಲೇರಿ ಜೇನುಹುಳು ಮತ್ತು ಅವುಗಳ ಲಾರ್ವಾಗಳನ್ನು ತಿನ್ನುವ ಅಭ್ಯಾಸ ಹೊಂದಿವೆ. ಯುರೋಪ್ ಮತ್ತು ಪಶ್ಚಿಮ ಏಷ್ಯಾದಲ್ಲಿ ನೆಲೆಸುವ ಇವು, ಚಳಿಗಾಲದ ಆರಂಭದಲ್ಲಿ ದಕ್ಷಿಣದತ್ತ ಮುಖಮಾಡುತ್ತವೆ.



ಇವುಗಳ ವಲಸೆಯ ದಾರಿ ಎಷ್ಟು ಉದ್ದವೆಂದರೆ, ವಿಶ್ವದ ಅತ್ಯಂತ ದೀರ್ಘಾವಧಿಯ ವಲಸೆ ಹೋಗುವ ಶಿಕಾರಿ ಹಕ್ಕಿಗಳಲ್ಲಿ (**Raptors**) ಇವು ಅಗ್ರಸ್ಥಾನದಲ್ಲಿವೆ. ನೋಡಲು ನಮ್ಮೂರಿನ ಜೇನು ಗಿಡುಗದಂತೆ ಕಂಡರೂ, ಇವುಗಳ ರೆಕ್ಕೆಗಳ ವಿನ್ಯಾಸ ಮತ್ತು ವರ್ತನೆ ವಿಭಿನ್ನವಾಗಿರುತ್ತದೆ.

ನಗರೀಕರಣದ ಅಬ್ಬರದಲ್ಲಿ ನಾವು ಅಂಬಲಿಪುರ ಕೆರೆಯಂತಹ ಸಣ್ಣ ಜಲಮೂಲ, ಕೇವಲ ನೀರು ನಿಲ್ಲುವ ತಾಣಗಳೆಂದು ಭಾವಿಸುತ್ತೇವೆ. ಆದರೆ, ಸಾವಿರಾರು ಕಿಲೋಮೀಟರ್‌ನಿಂದ ಹಾರಿಕೊಂಡು ಬಂದಿರುವ ಈ ಪಕ್ಷಿ ನಮಗೆ ಬೇರೆಯದೇ ಪಾಠ ಕಲಿಸುತ್ತದೆ. ಇಂತಹ ದೀರ್ಘ ಪ್ರಯಾಣ ಮಾಡುವ ಹಕ್ಕಿಗಳಿಗೆ ನಮ್ಮ ಕೆರೆಗಳು ‘ಪೆಟ್ರೋಲ್ ಬಂಕ್’ಗಳಂತೆ. ಇಲ್ಲಿ ಅವು ದಣಿವಾರಿಸಿಕೊಂಡು, ಆಹಾರ ಸೇವಿಸಿ ಮತ್ತೆ ಪ್ರಯಾಣ ಬೆಳೆಸುತ್ತವೆ.

ಸುತ್ತಲೂ ವಾಹನಗಳ ದಟ್ಟಣೆ ಮತ್ತು ಹೊಗೆ ಇದ್ದರೂ, ಈ ಪುಟ್ಟ ಕೆರೆ ತನ್ನ ಸುತ್ತಲಿನ ಜೀವವೈವಿಧ್ಯವನ್ನು ಇನ್ನೂ ಕಾಪಾಡಿಕೊಂಡಿದೆ ಎಂಬುದಕ್ಕೆ ‘ಯುರೋಪಿಯನ್ ಹನಿ ಬಜಾರ್ಡ್’ ಆಗಮನವೇ ಸಾಕ್ಷಿಯಾಗಿದೆ. ‘ಅಭಿವೃದ್ಧಿ’ ಎಂಬ ಓಟದಲ್ಲಿ ಇಂತಹ ಸಣ್ಣ ಹಸಿರು ಪ್ರದೇಶಗಳನ್ನು ಕಡೆಗಣಿಸುತ್ತಿದ್ದೇವೆ. ಆದರೆ ಪ್ರಕೃತಿಯ ದೃಷ್ಟಿಯಲ್ಲಿ ಈ ಪ್ರತಿಯೊಂದು ಗುಂಟೆ ಜಾಗವೂ ಅಮೂಲ್ಯ ಎಂಬುದನ್ನು ಈ ವಿದೇಶಿ ಪಕ್ಷಿಯ ಆಗಮನ ನಿರೂಪಿಸಿದೆ.

ಬೆಂಗಳೂರಿನ ಪಕ್ಷಿ ವೀಕ್ಷಕರಾದ ಆದಿತ್ಯ ಜಿ. ತಿಳಿ ಅವರು ‘ಯುರೋಪಿಯನ್ ಹನಿ ಬಜಾರ್ಡ್’ ಪಕ್ಷಿಯನ್ನು ತಮ್ಮ ಕ್ಯಾಮೆರಾ ಕಣ್ಣಿನಲ್ಲಿ ಸೆರೆಹಿಡಿದಿದ್ದಾರೆ. ಈ ದೃಶ್ಯವನ್ನು ‘ಅತ್ಯಂತ ಅಪರೂಪ’ ಎಂದು ಬಣ್ಣಿಸಿರುವ ಅವರು, ‘ಕಾಡಿನ ಪರಿಸರ ಹೊಂದಿರುವ ಮೇಲಿನ ಅಂಬಲಿಪುರ ಕೆರೆಯ ತೆರೆದ ಪ್ರದೇಶ ಈ ಪಕ್ಷಿಗೆ ಸೂಕ್ತ ವಾಸಸ್ಥಾನ. ಬೆಂಗಳೂರು ‘ಉದ್ಯಾನ ನಗರಿ’ಯಾಗಿಯೇ ಉಳಿಯಬೇಕಾದರೆ, ನಾವು ನಗರದ ಪ್ರತಿಯೊಂದು ಚಿಕ್ಕ ಹಸಿರು ಪ್ರದೇಶವನ್ನು ಮತ್ತು ಪ್ರತಿ ಕೆರೆಯನ್ನು ಸಂರಕ್ಷಿಸಬೇಕಾದ ಅಗತ್ಯವಿದೆ’ ಎಂದು ಅಭಿಪ್ರಾಯಪಡುತ್ತಾರೆ.

ನಗರದಲ್ಲಿ ಹಲವು ಕೆರೆಗಳು ಪಕ್ಷಿಗಳ ವಲಸೆಗೆ ತಾಣಗಳಾಗಿವೆ. ಅಪರೂಪಕ್ಕೂ ಅಪರೂಪವೆನಿಸುವ ಹಕ್ಕಿಗಳೂ ‘ಕೆರೆಗಳ ನಗರಿ’ ಬೆಂಗಳೂರಿಗೆ ಬರುತ್ತವೆ. ಇಂತಹ ಅತ್ಯಂತ ವಿರಳ ಪ್ರಭೇದದ ‘ಯುರೋಪಿಯನ್ ಹನಿ ಬಜಾರ್ಡ್’ ನಗರಕ್ಕೆ ಬಂದು ನಗರದ ಕೆರೆಗಳು ಕೇವಲ ಭೂಮಿಯ ಬೆಲೆಯನ್ನು ಹೆಚ್ಚಿಸುವ ಸಾಧನಗಳಲ್ಲ ಎಂಬುದನ್ನು ಸಾರಿ ಸಾರಿ ಹೇಳಿದೆ. ಕೆರೆಗಳು ಜಾಗತಿಕ ಪರಿಸರ ವ್ಯವಸ್ಥೆಯ ಅವಿಭಾಜ್ಯ ಅಂಗ. ಇದನ್ನು ಅರಿತು ಬೆಂಗಳೂರಿನ ಕೆರೆಗಳು ಜೀವವೈವಿಧ್ಯ ತಾಣಗಳಾಗಿ ಅಭಿವೃದ್ಧಿ ಕಂಡರೆ, ಸಂರಕ್ಷಿತ ತಾಣಗಳಾದರೆ ಇನ್ನಷ್ಟು ಜಾಗತಿಕ ಪ್ರವಾಸಿ ತಾಣಗಳಾಗುವಲ್ಲಿ ಸಂದೇಹವಿಲ್ಲ. ಮೇಲಿನ ಅಂಬಲಿಪುರ ಕೆರೆಯಂತಹ ತಾಣಗಳು ಅನಿವಾರ್ಯವೇ ಹೊರತು, ಐಚ್ಛಿಕವಲ್ಲ. ಇವುಗಳ ಉಳಿವಿನಲ್ಲೇ ನಮ್ಮ ಉಳಿವಿದೆ. ■